**SN – 094**

BBM.

**ಮೂರನೇಯ ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2013**

**(Repeaters) (2011-12 only)**

**ಕನ್ನಡ ಭಾಷೆ – III**

**ಸಾಹಿತ್ಯ ಸಲ್ಲಾಪ – 2 ಮತ್ತು ಸಂವಹನ ಕೌಶಲ**

Time : 3 Hours Max. Marks : 90

ST. CLARET COLLEGE LIBRARY

## ಭಾಗ – 1

**ಸಾಹಿತ್ಯ ಪಠ್ಯಗಳು**

I. ಪದ್ಯದ ಭಾವಾರ್ಥ ಬರೆಯಿರಿ : **(1×5=5)**

ಸಿಂಹ ಮದಕರಿಯ ಮೇಲೆ ಹಾರುವುದಲ್ಲದೆ,
ಮದಮಹಿಷಿಯ ಮೇಲೆ ಹಾರುವುದೆ ಅಯ್ಯಾ ?
ಪಕ್ಷಿ ಆಕಾಶದಲ್ಲಿ ಹಾರುವುದಲ್ಲದೆ,
ಪಂಜರದಲ್ಲಿ ಹಾರದು ನೋಡಯ್ಯಾ,
ನಮ್ಮ ಕಪಿಲಸಿದ್ಧ ಮಲ್ಲೇಶನನರಿವವರು
ಜ್ಞಾನದ ಮೇಲೆ ಹಾರುವರಲ್ಲದೆ ಅಜ್ಞಾನದಲ್ಲಿ ಹಾರರು.

II. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(3×5=15)**

1) ಜಲಗಾರ ದೇವರನ್ನು ಎಲ್ಲಿ ಕಾಣುತ್ತಾನೆ ?
2) 'ರಂಗೋಲಿ ಮತ್ತು ಮಗ' ಕವಿತೆಯಲ್ಲಿ ಕವಿಯನ್ನು ಪೇಚಿಗಿಡಿಸಿದ ಸಂಗತಿ ಯಾವುದು ?
3) 'ಇರುವ ಅವ್ವನ ಕೋಳಿಮೊಟ್ಟೆಯನ್ನೇ ಹಿಡಿದು ಸಾಗಿಸಿದರೆ ಹೇಗೆ' ಎಂದು ನಿರೂಪಕ ಯೋಚಿಸಲು ಕಾರಣವೇನು ?
4) ಭಾವೋಪಯೋಗಿಯಾಗಿ ಭಾಷೆಯ ಕೆಲಸವನ್ನು ವಿವರಿಸಿ.
5) 'ಅರ್ಥವುಂಟೆಂದು ಅಹಂಕರಿಸಿ ಮಾಡುವ ಭಕ್ತಿ'ಯ ಸ್ವರೂಪವೇನು ?

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×10=30)**

1) ಜಿರಳೆಗಳನ್ನು ಲೇಖಕರು 'ಚಿರಂಜೀವಿ ರಾಕ್ಷಸ' ಎಂದು ಕರೆಯಲು ಕಾರಣಗಳೇನು ? ವಿವರಿಸಿ.

2) ಜಲಗಾರನ ಭಕ್ತಿಗೂ ಕುಂಬಾರ ಗುಂಡಯ್ಯನ ಭಕ್ತಿಗೂ ಇರುವ ಸಾಮ್ಯಗಳೇನು ? ವಿಶದಪಡಿಸಿ.

3) ಚನ್ನಮಲ್ಲಿಕಾರ್ಜುನನ ಸ್ವರೂಪವನ್ನು ಅಕ್ಕಮಹಾದೇವಿ ಹೇಗೆ ಚಿತ್ರಿಸಿದ್ದಾಳೆ ? ವಿವರಿಸಿ.

4) ರಂಗೋಲಿ ಹುಟ್ಟುಹಾಕಿದ ಪ್ರಶ್ನೆಯ ತಾತ್ವಿಕ ಜಿಜ್ಞಾಸೆಯನ್ನು ಕುರಿತು ಬರೆಯಿರಿ.

5) ಕರಡಯ್ಯನ ಮಾಂಸದೂಟದ ಚಟ ಚೆನ್ನವ್ವನ ಬದುಕಿನ ಮೇಲೆ ಬೀರಿದ ಪರಿಣಾಮಗಳು ಯಾವುವು ? ವಿವರಿಸಿ.

## ಭಾಗ – 2

## ಸಂವಹನ ಕೌಶಲ

I. ಇವುಗಳಲ್ಲಿ **ನಾಲ್ಕು** ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ : **(4×5=20)**

1) ಶಾಬ್ದಿಕ ಸಂವಹನ

2) ಉದ್ಗಾರವಾದ

3) ಸಂಕೇತ ಭಾಷೆ

4) ವೃತ್ತಪತ್ರಿಕೆ

5) ಅಂತರ್ಜಾಲ

6) ಸಂವಹನದ ಕಾರ್ಯಗಳು.

II. ಇವುಗಳಲ್ಲಿ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2×10=20)**

1) ಸಮೂಹ ಸಂವಹನ ಮಾಧ್ಯಮವಾಗಿ ಚಲನಚಿತ್ರ ಮಾಧ್ಯಮದ ಪಾತ್ರವೇನು ? ವಿವರಿಸಿ.

2) ಸಂವಹನ ಎಂದರೇನು ? ಸಂವಹನ ಕಲೆಯ ಮಹತ್ವವನ್ನು ತಿಳಿಸಿ.

3) ವಿಷಯ ಪ್ರಸ್ತುತಿ ಕಲೆ ಎಂದರೇನು ? ವಿಷಯ ಪ್ರಸ್ತುತಿಗೆ ಅಗತ್ಯವಾದ ಅಂಶಗಳು ಯಾವುವು ? ವಿವರಿಸಿ.

4) ವೈಯಕ್ತಿಕ ಸಂವಹನ ಎಂದರೇನು ? ಅದು ಏರ್ಪಡುವ ಬಗೆಗಳನ್ನು ಪರಿಚಯಿಸಿ.

---